ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 29-05-1970

*ಸಮೀಪ ರತ್ನಗಳ ಗುರುತುಗಳು* (समीप रत्नों की निशानियां)

ಸಮಯ ಎಷ್ಟು ಸಮೀಪ ತಲುಪಿದೆ ಎಂದು ಕಂಡು ಬರುತ್ತಿದೆ? ಲೆಕ್ಕ ಮಾಡಬಲ್ಲಿರಾ? ಭವಿಷ್ಯ ಲಕ್ಷಣದ ಜೊತೆಗೆ ಸಂಪೂರ್ಣ ಸ್ವರೂಪದ ಲಕ್ಷಣವು ಮುಂದಿರುತ್ತದೆಯೇ? ಸಮೀಪದ ಲಕ್ಷಣಗಳೇನಿರುವವು? ಶರೀರ ಬಿಡುವವರಿಗೆ ಮೊದಲೇ ಹೇಗೆ ಗೊತ್ತಾಗುತ್ತದೆಯೋ ಹಾಗೆ ತಾವೂ ಸಹ ಈ ಶರೀರ ಭಿನ್ನವಾದಂತೆ, ಇದನ್ನು ನಾವು ಧಾರಣೆ ಮಾಡಿ ನಡೆಸುತ್ತಿದ್ದೇವೆ ಎಂದು ಅನುಭವ ಮಾಡುವಿರಿ. ಸಮೀಪ ರತ್ನದ ಸಮೀಪ ಬರುವ ಲಕ್ಷಣ ಇದಾಗಿದೆ. ಸದಾ ತಮ್ಮ ಆಕಾರಿ ರೂಪ ಮತ್ತು ಭವಿಷ್ಯ ರೂಪ ಸಮ್ಮುಖದಲ್ಲಿ ನೋಡುವಿರಿ. ಪ್ರಾಕ್ಟಿಕಲ್ ಅನುಭವವಾಗುವುದು. ಎದುರಿಗೆ ಈ ರೀತಿ ಆಗಬೇಕು ಎಂಬ ಪ್ರಕಾಶದ ಫರಿಶ್ತಾ ಸ್ವರೂಪ ಮತ್ತು ಭವಿಷ್ಯ ರೂಪ, ಈಗ ಇದನ್ನು ಬಿಡುವೆನು ಮತ್ತು ಅದನ್ನು ಪಡೆಯುವೆನು ಎಂದು ಪ್ರತ್ಯಕ್ಷವಾಗಿ ಕಂಡು ಬರುವುದು. ಯಾವಾಗ ಇಂತಹ ಅನುಭೂತಿಯಾಗುವುದೋ ಆಗ ಸಂಪೂರ್ಣತೆಗೆ ಸಮೀಪವಿದ್ದೇವೆ ಎಂದು ತಿಳಿಯಿರಿ. ಒಂದು ಕಣ್ಣಲ್ಲಿ ಸಂಪೂರ್ಣ ಸ್ವರೂಪ ಮತ್ತು ಇನ್ನೊಂದು ಕಣ್ಣಲ್ಲಿ ಭವಿಷ್ಯ ಸ್ವರೂಪ. ಈ ರೀತಿ ಪ್ರತ್ಯಕ್ಷವಾಗಿ ಕಂಡು ಬರುವುದು. ಹೇಗೆ ತಮ್ಮ ಈ ಸ್ವರೂಪ ಪ್ರತ್ಯಕ್ಷ ಅನುಭವವಾಗುತ್ತದೆಯೋ ಹಾಗೆ ಕುಳಿತಲ್ಲಿಯೇ ಇಲ್ಲಿ ಇಲ್ಲ. ಆದರೆ ಆ ಸಂಪೂರ್ಣ ಸ್ವರೂಪದಲ್ಲಿ ಕುಳಿತಿದ್ದೇವೆ ಎಂದು ಅನುಭವ ಮಾಡುವಿರಿ. ಈ ಪುರುಷಾರ್ಥಿ ಶರೀರ ಒಮ್ಮೆಲೇ ಗುಪ್ತವಾಗಿ ಆ ಎರಡು ಪ್ರಕಟವಾಗುವವು. ಒಂದು ಕಡೆಗೆ ಅವ್ಯಕ್ತ ಇನ್ನೊಂದು ಕಡೆಗೆ ಭವಿಷ್ಯ. ಯಾವಾಗ ಮೊದಲು ತಾವು ಅನುಭವ ಮಾಡುವಿರೋ ಆಗ ಬೇರೆಯವರಿಗೆ ಸಹ ಅನುಭವವಾಗುವುದು. ಹೇಗೆ ಒಂದು ವಸ್ತ್ರವನ್ನು ಬಿಟ್ಟು ಇನ್ನೊಂದನ್ನು ಪಡೆಯುವಂತೆ ಅನುಭವ ಮಾಡುವಿರಿ. ಇದು ಗುಪ್ತವಾಗಿ ಅದು ಪ್ರಕಟವಾಗುವುದು. ಇದು ಮರೆಯುತ್ತಾ ಹೋಗುವುದು. ಈ ಸ್ಥಿತಿಯಲ್ಲಿ ಇಚ್ಛಾಶಕ್ತಿಯೂ ಇರುತ್ತದೆ. ವೀಲುನಾಮೆಯನ್ನು ಬರೆದ ಮೇಲೆ (ಆಸ್ತಿಯನ್ನು ಮಕ್ಕಳಿಗೆ ಕೊಡುವಾಗ ಅಥವಾ ಇನ್ನಿತರರಿಗೆ ಕೊಡುವಾಗ ಬರೆಯುವ ಪತ್ರ) ನನ್ನತನವೆಲ್ಲವೂ ನಷ್ಟವಾಗುತ್ತದೆ. ಕರ್ತವ್ಯ ತೀರಿ ಹೋಗುತ್ತದೆ. ಇದರಲ್ಲಿ ಆತ್ಮಿಕ ಶಕ್ತಿಯೂ ಬರುತ್ತದೆ. ಎಲ್ಲವನ್ನೂ ಅರ್ಪಣೆ ಮಾಡಿದೆವು ಎಂದು ಅನುಭವವಾಗುತ್ತದೆ. ಸಂಕಲ್ಪ ಸಹಿತ ಎಲ್ಲವೂ ಅರ್ಪಣೆಯಾಗಬೇಕು. ಶರೀರದ ಭಾವನೆ ಬಿಡಬೇಕು ಮತ್ತು ಸಂಕಲ್ಪಗಳ ಪೂರ್ಣ ಅರ್ಪಣೆ ಮಾಡಬೇಕು ಇದಾಗಿದೆ ಶಕ್ತಿ ಸ್ವರೂಪ. ನಂತರ ಸಮಾನತೆಯ ಸ್ಥಿತಿಯಾಗುವುದು. ಸಮಾನತೆ ಅಥವಾ ಸಂಪೂರ್ಣತೆ ಒಂದೇ ಮಾತಾಗಿವೆ. ಈಗ ಈ ಚಾರ್ಟ್ ಇಡಿ ಇದು ಸಾಮಾನ್ಯ ಚಾರ್ಟ್ ಆಗಿದೆ. 5 ತತ್ವಗಳ ಶರೀರವಾಗಿದ್ದರೂ ಪ್ರಕಾಶ ಸ್ವರೂಪದಲ್ಲಿ ಅನುಭವ ಮಾಡುವಿರಿ. ಲೈಟ್ ಶಬ್ದದ ಅರ್ಥದಲ್ಲಿಯೂ ಅಂತರವಿದೆ ಎಂದು ಹೇಳಿದ್ದೆವಲ್ಲವೇ? ಲೈಟ್ ಎಂದರೆ ಹಗುರತೆ ಎಂದೂ ಆಗುತ್ತದೆ ಮತ್ತು ಪ್ರಕಾಶ ಎಂದೂ ಕರೆಯಲಾಗುತ್ತದೆ. ಪೂರ್ಣ ಎಂದರೆ ಲೈಟ್ ರೂಪವಾಗಿ ನಡೆಯುತ್ತಿದ್ದೇವೆ, ನಾವು ನಿಮಿತ್ತರಾಗಿದ್ದೇವೆ. ಅವ್ಯಕ್ತ ರೂಪದಲ್ಲಿ ಪ್ರತಿಯೊಂದು ಮಾತಿನಲ್ಲಿ ಸಹಯೋಗ ಸಿಗುತ್ತದೆ. ಒಳ್ಳೆಯದು.

**ಪಾರ್ಟಿಯ ಜೊತೆಗೆ**

1. ಎಲ್ಲರ ಪುರುಷಾರ್ಥ ಚೆನ್ನಾಗಿದೆಯಾ? ಯಾವ ನಂಬರಿನ ಗುರಿಯಿಟ್ಟುಕೊಂಡಿರುವಿರಿ? ಮೊದಲನೆಯ ನಂಬರಿಗೆ, ಏನು ಮಾಡಬೇಕೆಂದು ಗೊತ್ತಿದೆಯೇ? ಅದಕ್ಕಾಗಿ ವಿಶೇಷ ಫಾಸ್ಟ್ (ವ್ರತ) ಇಟ್ಟುಕೊಳ್ಳಬೇಕು. ಫಾಸ್ಟ್ ನ ಎರಡು ಅರ್ಥಗಳಿವೆ. ಒಂದು ವ್ರತಕ್ಕೂ ಹೇಳಲಾಗುತ್ತದೆ. ಹಾಗಾದರೆ ಯಾವ ವ್ರತವನ್ನು ಇಟ್ಟುಕೊಳ್ಳುವಿರಿ? ಪವಿತ್ರತೆಯ ವ್ರತ, ಈ ವ್ರತವಂತೂ ಸಾಮಾನ್ಯವಾದುದು. ಈ ವ್ರತವನ್ನು ಎಲ್ಲರೂ ಇಟ್ಟುಕೊಳ್ಳುತ್ತಾರೆ. ಮೊದಲಿಗರಾಗಬೇಕಾದರೆ ಒಬ್ಬ ತಂದೆಯ ಹೊರತು ಇನ್ನಾರೂ

ಇಲ್ಲ ಎಂಬ ವಿಶೇಷ ವ್ರತವನ್ನು ಇಟ್ಟುಕೊಳ್ಳಬೇಕು. ಪ್ರತಿಯೊಂದು ಮಾತಿನಲ್ಲಿ ಒಬ್ಬನ ಸ್ಮೃತಿಯಿರಬೇಕು. ಈ ವ್ರತವನ್ನು ಇಟ್ಟುಕೊಂಡಾಗ ಮೊದಲಿಗರಾಗುವಿರಿ. ಎರಡನೆಯ ಫಾಸ್ಟ್ ಆಗಿದೆ - ಬೇಗ ನಡೆಯುವುದಕ್ಕೂ ಹೇಳಲಾಗುತ್ತದೆ ಎಂದರೆ ತೀವ್ರ ಪುರುಷಾರ್ಥ, ಸದಾ ಮಾಯೆಯ ಮೇಲೆ ವಿಜಯ ಪ್ರಾಪ್ತಿ ಮಾಡಿಕೊಳ್ಳುವವರಿಗೆ ಮಹಾರಥಿ ಎಂದು ಹೇಳಲಾಗುತ್ತದೆ. ಮಾಯೆಗೆ ಸದಾಕಾಲಕ್ಕಾಗಿ ವಿದಾಯವನ್ನು ಕೊಡಿ. ವಿಘ್ನಗಳನ್ನು ದೂರ ಮಾಡಲು ಪೂರ್ಣ ಜ್ಞಾನವಿದೆಯಾ? ಸರ್ವಶಕ್ತಿವಂತನ ಮಕ್ಕಳು ಮಾಸ್ಟರ್ ಸರ್ವಶಕ್ತಿವಂತರಾಗಿದ್ದೀರಿ. ಹಾಗಾದರೆ ಜ್ಞಾನದ ಆಧಾರದ ಮೇಲೆ ವಿಘ್ನಗಳನ್ನು ದೂರ ಮಾಡಿ ಸದಾ ಮಗ್ನ ಸ್ಥಿತಿಯಿರಲಿ. ವಿಘ್ನಗಳು ದೂರವಾಗದಿದ್ದರೆ ಅವಶ್ಯ ಶಕ್ತಿ ಪಡೆಯುವಲ್ಲಿ ಕೊರತೆ ಇದೆ. ಜ್ಞಾನ ಪಡೆದಿರುವಿರಿ ಆದರೆ ಅದನ್ನು ಅಳವಡಿಸಿಕೊಂಡಿಲ್ಲ. ಜ್ಞಾನವನ್ನು ಅಳವಡಿಸಿಕೊಳ್ಳುವುದು ಎಂದರೆ ಸ್ವರೂಪವಾಗುವುದು. ಅರಿವಿನಿಂದ ಕರ್ಮವಾದಾಗ ಸಫಲತೆಯ ಫಲ ಅವಶ್ಯ ಸಿಗುವುದು.

2 - ತೀವ್ರ ಪುರುಷಾರ್ಥಿಯ ಲಕ್ಷಣಗಳೇನು? ಆಜ್ಞಾಕಾರಿ ಎಂದು ಯಾರಿಗೆ ಹೇಳಲಾಗುತ್ತದೆ ಎಂದು ತಿಳಿಸಲಾಗಿತ್ತಲ್ಲವೇ? (ಯಾರ ಸಂಕಲ್ಪವೂ ಅಜ್ಞೆಯಿಲ್ಲದೆ ನಡೆಯುವುದಿಲ್ಲವೋ ಅವರನ್ನು). ಇಂತಹ ಆಜ್ಞಾಕಾರಿಗಳನ್ನೇ ತೀವ್ರ ಪುರುಷಾರ್ಥಿ ಎಂದು ಕರೆಯಲಾಗುತ್ತದೆ. ಸರ್ವಶಕ್ತಿವಂತ ತಂದೆಯ ಮಕ್ಕಳು ಶಕ್ತಿವಂತರಾಗಿದ್ದಾರೆ. ಅವರ ಮುಂದೆ ಮಾಯೆಯೂ ದೂರದಿಂದಲೇ ಕೈ ಮುಗಿದು ವಿದಾಯವನ್ನು ಪಡೆಯುತ್ತದೆ. ವಲ್ಲಭಾಚಾರಿ ಜನ ತಮ್ಮ ಶಿಷ್ಯರನ್ನು ಮುಟ್ಟಲೂ ಬಿಡುವುದಿಲ್ಲ. ಅಸ್ಪೃಶ್ಯರನ್ನು ಒಂದು ವೇಳೆ ಮುಟ್ಟಿದರೆ ಸ್ನಾನ ಮಾಡುತ್ತಾರೆ. ಇಲ್ಲಿಯೂ ಅಸ್ಪೃಶ್ಯ ಸಮೀಪದಲ್ಲಿ ಬರದಂತೆ ಜ್ಞಾನ ಸ್ನಾನ ಮಾಡಿ ಶಕ್ತಿಯನ್ನು ಧಾರಣೆ ಮಾಡಿ, ಮಾಯೆ ಏನಾಗಿದೆ? ಅಸ್ಪೃಶ್ಯ ಒಳ್ಳೆಯದು.

ಅವ್ಯಕ್ತ ಮುರಳಿ 29-05-1970.

***ಸಮೀಪ ರತ್ನಗಳ ಗುರುತುಗಳು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಭವಿಷ್ಯ ಲಕ್ಷಣಗಳೊಂದಿಗೆ ಸಂಪೂರ್ಣ ಸ್ವರೂಪದ ಗುರಿಯನ್ನು ಕೂಡಾ ಎದುರಿಗೆ ಇಟ್ಟುಕೊಂಡಿದ್ದೇನೆ.

2. ನಾನು 'ಶರೀರ ಬೇರೆ, ಅದನ್ನು ಧರಿಸಿರುವ ವಸ್ತ್ರವನ್ನು ನಡೆಸುತ್ತಿದ್ದೇನೆ' ಎಂದು ಸದಾ ಅನುಭವ ಮಾಡಿಕೊಂಡಿರುವ ಸಮೀಪರತ್ನ.

3. ನನ್ನ ಪುರುಷಾರ್ಥಿ ಶರೀರ ಪೂರ್ತಿ ಗುಪ್ತವಾಗಿ ಫರಿಶ್ತಾ ಸ್ವರೂಪ ಮತ್ತು ಭವಿಷ್ಯ ಸ್ವರೂಪ ಎರಡೂ ಪ್ರತ್ಯಕ್ಷವಾಗಿವೆ.

4. ನಾನು ಸಂಕಲ್ಪದೊಂದಿಗೆ ಎಲ್ಲವನ್ನು ಅರ್ಪಣೆ ಮಾಡಿರುವ ಶಕ್ತಿ ಸ್ವರೂಪ, ಸಮಾನಸ್ವರೂಪ ಮತ್ತು ಸಂಪೂರ್ಣ ಸ್ವರೂಪ.

5. ನಾನು ಲೈಟ್ ರೂಪವಾಗಿ ತಯಾರಾಗಿ, ನಿಮಿತ್ತವಾಗಿ ಅವ್ಯಕ್ತ ರೂಪದಲ್ಲಿ ನಡೆಯುತ್ತಾ ಪ್ರತಿ ವಿಷಯದಲ್ಲಿ ಸಹಯೋಗವನ್ನು ಹೊಂದಿದ್ದೇನೆ.